## ಮಂಗಳೂರು ವಿಶ್ವವಿದ್ಯಾನಿಲಯ

**Accredited by NAAC with 'A' Grade**

ಸಂಖ್ಯೆ: ಮವಿ/ಪವಿ/ಸಿ.ಆರ್.13/ಯು.ಜಿ/2020-21/ಇ.29

ಕುಲಸಚಿವ (ಪರೀಕ್ಷಾಂಗ)ರ ಕಛೇರಿ,
ಮಂಗಳಗಂಗೋತ್ರಿ – 574 199.
ದಿನಾಂಕ: 03.09.2020.

**ಪರಿಷ್ಕೃತ ಪರೀಕ್ಷಾ ಪ್ರಕಟಣೆ**

ವಿಷಯ: ದೂರಶಿಕ್ಷಣ ಕಾರ್ಯಕ್ರಮದ ಸ್ನಾತಕೋತ್ತರ ಪದವಿ ಎಂ.ಕಾಂ, ಎಂ. ಬಿ. ಎ. (ಟೂರಿಸಂ) ಹಾಗೂ ಎಂ.ಎ.ಕೋರ್ಸುಗಳಿಗೆ ಪರೀಕ್ಷಾ ಪ್ರಕಟಣೆಯನ್ನು ಪರಿಷ್ಕರಿಸಿದ ಬಗ್ಗೆ.

ಉಲ್ಲೇಖ : 1. ಈ ಕಛೇರಿ ಪರೀಕ್ಷೆ ಪ್ರಕಟಣೆ ಸಮ ಸಂಖ್ಯೆ ದಿನಾಂಕ: 06.02.2020.
2. ಅಧಿಸೂಚನೆ ಸಂಖ್ಯೆ: MU/ACC/Cor-Cal/CR – 7/2019-20/A6 ದಿನಾಂಕ: 11.08.2020.
3. ಮಾನ್ಯ ಕುಲಪತಿಯವರ ಆದೇಶ ದಿನಾಂಕ : 20.08.2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿ, ಉಲ್ಲೇಖ(1)ರ ಪ್ರಕಟಣೆಯಲ್ಲಿ ನಿಗದಿಪಡಿಸಲಾಗಿದ್ದ, 2020ರ ಜೂನ್/ಜುಲೈ ಎಂ.ಬಿ.ಎ(ಟೂರಿಸಂ), ಎಂ.ಕಾಂ ಮತ್ತು ಎಂ.ಎ. (ಹಿಂದಿ, ಕನ್ನಡ, ಇಂಗ್ಲೀಷ್, ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಹಾಗೂ ಸಮಾಜಶಾಸ್ತ್ರ) ಸ್ನಾತಕೋತ್ತರ ಪದವಿಯ ಲಿಖಿತ ಪರೀಕ್ಷೆಗಳನ್ನು ಕೋವಿಡ್-19ರ ಹಿನ್ನಲೆಯಲ್ಲಿ ಮುಂದೂಡಲಾಗಿದ್ದು, ಸದರಿ ಪರೀಕ್ಷೆಗಳು ದಿನಾಂಕ 15.10.2020ರಿಂದ ಪ್ರಾರಂಭವಾಗಲಿರುವುದು ಎಂಬುದನ್ನು ಪದವಿ ಪರೀಕ್ಷೆಗಳಿಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳ ಗಮನಕ್ಕೆ ತರಲು ಈ ಮೂಲಕ ಸೂಚಿಸಲಾಗಿದೆ.

**ಅಂತಿಮ ವರ್ಷದ ಆವರ್ತಿತ ಮತ್ತು ಪುನರಾವರ್ತಿತ ಪರೀಕ್ಷೆಗಳಿಗೆ ಹಾಜರಾಗಲಿರುವ ವಿದ್ಯಾರ್ಥಿಗಳಿಗೆ ಮತ್ತು ಈಗಾಗಲೇ ಸ್ನಾತಕೋತ್ತರ ಪದವಿಯನ್ನು ಮುಗಿಸಿ ಹಿಂದಿನ ಹಿಂಬಾಕಿ ಇರುವ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುವಂತೆ ಪ್ರಥಮ ಮತ್ತು ಅಂತಿಮ ವರ್ಷದ ಪುನರಾವರ್ತಿತ ಪರೀಕ್ಷೆಗಳು ದಿನಾಂಕ 15.10.2020ರಿಂದ ಪ್ರಾರಂಭವಾಗಲಿರುವುದು. ಈಗಾಗಲೇ ಪರೀಕ್ಷಾ ಶುಲ್ಕವನ್ನು ಪಾವತಿಸದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ದಿನಾಂಕ 16.09.2020ರೊಳಗೆ ಪಾವತಿಸಲು ತಿಳಿಸಲಾಗಿದೆ.**

**ಪರೀಕ್ಷಾ ಶುಲ್ಕವನ್ನು ಕಟ್ಟಲು ನಿಗದಿಪಡಿಸಲಾದ ಅಂತಿಮ ದಿನಾಂಕ:**

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **16.09.2020**

***ನಿಗದಿಪಡಿಸಿರುವ ಪರೀಕ್ಷಾ ಶುಲ್ಕದ ದರಗಳು:***

ಪೂರ್ಣ ಪರೀಕ್ಷೆಗೆ : ರೂ. 1,450.00

**ಸೂಚನೆ: ಅಂತಿಮ ದಿನಾಂಕ 16.09.2020ರ ನಂತರ ಶುಲ್ಕ ಪಾವತಿಸಿ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ**

1. **ಪುನರಾವರ್ತಿತ ವಿದ್ಯಾರ್ಥಿಗಳು ವಿಷಯವೊಂದಕ್ಕೆ ರೂ.300/-, ರೂ.120/- ಅರ್ಜಿ ಶುಲ್ಕ ಮತ್ತು ರೂ. 230/- ಅಂಕಪಟ್ಟಿ ಶುಲ್ಕವನ್ನು ಪಾವತಿಮಾಡತಕ್ಕದ್ದು.**
2. ಸವಿವರವಾದ ವೇಳಾಪಟ್ಟಿಯನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು
3. ವಿದೇಶೀ ಅಭ್ಯರ್ಥಿಗಳು ನಿಗದಿಪಡಿಸಿದ ಶುಲ್ಕದ ಮೂರು ಪಟ್ಟು ಶುಲ್ಕವನ್ನು ಪಾವತಿಮಾಡತಕ್ಕದ್ದು.
4. ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗಲಿರುವ ಅಭ್ಯರ್ಥಿಗಳು ಎಲ್ಲಾ ವಿಷಯಗಳಲ್ಲಿ ಮತ್ತು ಪತ್ರಿಕೆಗಳಿಗೆ ಕಡ್ಡಾಯವಾಗಿ ನೋಂದಣಿ ಮಾಡತಕ್ಕದ್ದು.
5. ಒಮ್ಮೆ ಪಾವತಿಸಿದ ಪರೀಕ್ಷಾ ಶುಲ್ಕವನ್ನು ಯಾವುದೇ ಕಾರಣದಿಂದಲೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
6. ಕನ್ನಡ ಮಾಧ್ಯಮದಲ್ಲಿ ಉತ್ತರಿಸಬಯಸುವ ವಿದ್ಯಾರ್ಥಿಗಳು ಈ ಕೋರಿಕೆಯನ್ನು ಪರೀಕ್ಷಾ ಅರ್ಜಿಯಲ್ಲಿ ನಮೂದಿಸಬೇಕು.
7. ಪರೀಕ್ಷಾ ಪ್ರವೇಶ ಪತ್ರವನ್ನು ವಿದ್ಯಾರ್ಥಿಗಳಿಗೆ ಅಂಚೆ ಮೂಲಕ ರವಾನಿಸಲಾಗುವುದಿಲ್ಲ. ಪರೀಕ್ಷೆಗಳು ಪ್ರಾರಂಭವಾಗುವುದಕ್ಕೆ ಎರಡು ದಿನ ಮುಂಚಿತವಾಗಿ ಅಭ್ಯರ್ಥಿಗಳು ಆವರವರ ಪರೀಕ್ಷಾ ಕೇಂದ್ರಗಳಲ್ಲಿ ತಮ್ಮ ಗುರುತಿನ ಕಾರ್ಡುಗಳನ್ನು ಹಾಜರುಪಡಿಸಿ ಪ್ರವೇಶ ಪತ್ರವನ್ನು ಪಡೆಯಬೇಕು. ಪರೀಕ್ಷೆಯು ನಡೆಯುತ್ತಿರುವ ಸಂದರ್ಭಗಳಲ್ಲಿ ವಿದ್ಯಾರ್ಥಿಯು ಗುರುತಿನ ಕಾರ್ಡನ್ನು ಕಡ್ಡಾಯವಾಗಿ ಹೊಂದಿರಲೇಬೇಕು. ಇಲ್ಲವಾದರೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದಿಲ್ಲ.

8. ಪರೀಕ್ಷಾ ಅರ್ಜಿಯನ್ನು ಕಳುಹಿಸುವ ಮೊದಲು ಅರ್ಜಿಯ ಎಲ್ಲಾ ಅಂಕಣಗಳನ್ನು ಪೂರ್ಣವಾಗಿ/ಸರಿಯಾಗಿ ಭರ್ತಿ ಮಾಡಿದೆಯೇ ಎಂದು ಖಾತರಿಪಡಿಸಿಕೊಳ್ಳಬೇಕು. ಮೂಲ ಚಲನ್ ಪ್ರತಿಯನ್ನು ಅಡಕಗೊಳಿಸಿದೆಯೆ ಎಂಬುದನ್ನು ಖಾತ್ರಿಪಡಿಸಿಕೊಂಡು ಕಳುಹಿಸಿಕೊಡಬೇಕು. ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಸದ್ರಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಈ ಸಂಬಂಧವಾಗಿ ಯಾವುದೇ ಪತ್ರ ವ್ಯವಹಾರಕ್ಕೂ ಅವಕಾಶವಿರುವುದಿಲ್ಲ. ಹೆಚ್ಚಿನ ಮಾಹಿತಿಗೆ ಅರ್ಜಿಯ ಹಿಂದೆ ಮುದ್ರಿಸಿರುವ ವಿವರವನ್ನು ಪರಿಶೀಲಿಸಿಕೊಳ್ಳತಕ್ಕದ್ದು.

9. ಪರೀಕ್ಷಾ ಶುಲ್ಕದ ಹಣವನ್ನು ಚೆಕ್ಕುಗಳು, ಮನಿಯಾರ್ಡರ್ ಅಥವಾ ಬ್ಯಾಂಕ್ ಡ್ರಾಫ್ಟ್‌ಗಳ ಮೂಲಕ ಕಳುಹಿಸಿದರೆ ಅವುಗಳನ್ನು ಅಂಗೀಕರಿಸಲಾಗುವುದಿಲ್ಲ.

10. ವಿಶ್ವವಿದ್ಯಾನಿಲಯದ ಕಾನೂನು ಮತ್ತು ನಿಯಮ–ನಿಬಂಧನೆಗಳ ಪ್ರಕಾರ ಯಾವುದೇ ಅಭ್ಯರ್ಥಿ ಪರೀಕ್ಷೆ ತೆಗೆದುಕೊಳ್ಳಲು ಅನರ್ಹರಾಗಿದ್ದ ಪಕ್ಷದಲ್ಲಿ, ಕೇವಲ ಪರೀಕ್ಷಾ ಶುಲ್ಕ ಸಂದಾಯ ಮಾಡಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸಿದ ಮಾತ್ರಕ್ಕೆ ಆ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳುವ ಹಕ್ಕು ಇರುವುದಿಲ್ಲ. ಪರೀಕ್ಷಾ ಶುಲ್ಕ ಪಾವತಿಸದೇ ಪರೀಕ್ಷಾ ಕೇಂದ್ರದಲ್ಲಿ ತಪ್ಪು ಮಾಹಿತಿ ನೀಡಿ ಪರೀಕ್ಷೆ ಬರೆದರೆ ವಿಶ್ವವಿದ್ಯಾನಿಲಯ ಜವಾಬ್ದಾರಿಯಾಗುವುದಿಲ್ಲ ಹಾಗೂ ಫಲಿತಾಂಶ ತಡೆಹಿಡಿಯಲಾಗುವುದು.

11 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಮತ್ತು ಇತರ ಮೀಸಲಾತಿ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳೂ ಸಹ ಈ ಮೇಲೆ ನಮೂದಿಸಿರುವ ಪರೀಕ್ಷಾ ಶುಲ್ಕವನ್ನು ಪೂರ್ಣವಾಗಿ ಪಾವತಿಸಬೇಕು.

<u>ಅಧ್ಯಯನ ಕೇಂದ್ರದ ಸಂಯೋಜಕರುಗಳು : –</u> ತಮ್ಮ ಕೇಂದ್ರದಲ್ಲಿ ಸ್ವೀಕೃತಿಯಾದಂತಹ ಎಲ್ಲಾ ಅರ್ಜಿಗಳನ್ನು ಕ್ರೋಢೀಕರಿಸಿ/ಪುನರ್ ಪರಿಶೀಲಿಸಿ ವಿಶ್ವವಿದ್ಯಾನಿಲಯದ ಅಧಿಕೃತ ಅಂತರ್ಜಾಲ ತಾಣ > online IA / Exam Application Entry link ಮೂಲಕ ತಮಗೆ ನೀಡಲಾದ User ID Password ಗಳನ್ನು ಬಳಸಿ ಕಡ್ಡಾಯವಾಗಿ ಆನ್‌ಲೈನ್ ಮೂಲಕ ದಿನಾಂಕ **<u>19.09.2020</u>**ರ ಒಳಗಾಗಿ ಸಲ್ಲಿಸತಕ್ಕದ್ದು ಹಾಗೂ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ ದೊರಕುವ ಅಭ್ಯರ್ಥನಾ ಪಟ್ಟಿ, ಹಣಕಾಸು ತ:ಖ್ತೆಯನ್ನು ಮುದ್ರಿಸಿ ಸಹಿ ಮಾಡಿ ಡಿ.ಡಿ. / ಚಲನ್‌ಗಳೊಂದಿಗೆ ನಿರ್ದೇಶಕರು, ದೂರಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ದಿನಾಂಕ **24.09.2020**ರೊಳಗೆ ಕಳುಹಿಸತಕ್ಕದ್ದು.

<u>ನಿರ್ದೇಶಕರು, ದೂರಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರು</u> ತಮ್ಮಲ್ಲಿ ಸ್ವೀಕೃತಿಯಾದಂತಹ ಎಲ್ಲಾ ಅರ್ಜಿಗಳನ್ನು ಕ್ರೋಢೀಕರಿಸಿ/ಪುನರ್ ಪರಿಶೀಲಿಸಿ ವಿಶ್ವವಿದ್ಯಾನಿಲಯದ ಅಧಿಕೃತ ಅಂತರ್ಜಾಲ ತಾಣ <u>www.mangaloreuniversity.ac.in</u> > online IA / Exam Application Entry link ಮೂಲಕ ತಮಗೆ ನೀಡಲಾದ User ID Password ಗಳನ್ನು ಬಳಸಿ ಆನ್‌ಲೈನ್ ಮೂಲಕ ದಿನಾಂಕ **<u>29.09.2020</u>**ರ ಒಳಗಾಗಿ ಸಲ್ಲಿಸತಕ್ಕದ್ದು ಹಾಗೂ ಕಡ್ಡಾಯವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ ದೊರಕುವ ಅಭ್ಯರ್ಥನಾ ಪಟ್ಟಿ, ಹಣಕಾಸು ತ:ಖ್ತೆಯನ್ನು ಮುದ್ರಿಸಿ ಸಹಿ ಮಾಡಿ ಡಿ.ಡಿ. / ಚಲನ್‌ಗಳೊಂದಿಗೆ ಕಳುಹಿಸುವುದರೊಂದಿಗೆ ಅಧ್ಯಯನ ಕೇಂದ್ರಗಳಿಂದ ಬಂದ ಅರ್ಜಿಗಳು / ತ:ಖ್ತೆ / ಅಭ್ಯರ್ಥನಾ ಪಟ್ಟಿಗಳನ್ನು ಪುನರ್ ಪರಿಶೀಲಿಸಿ ಕ್ರೋಢೀಕರಿಸಿ ಚಲನ್/ಡಿ.ಡಿ.ಗಳೊಂದಿಗೆ ಈ ಕಛೇರಿಗೆ ದಿನಾಂಕ **05.10.2020**ರೊಳಗಾಗಿ ಕಳುಹಿಸಿಕೊಡತಕ್ಕದ್ದು.

.....03

<u>ವಿ.ಸೂ:</u> ಸ್ವೀಕೃತಿಯಾದಂತಹ ಎಲ್ಲಾ ಅರ್ಜಿಗಳನ್ನು ಕ್ರೋಢೀಕರಿಸಿ/ಪುನರ್ ಪರಿಶೀಲಿಸಿ ವಿಶ್ವವಿದ್ಯಾನಿಲಯದ ಅಧಿಕೃತ ಅಂತರ್ಜಾಲ ತಾಣ www.mangaloreuniversity.ac.in > online IA / Exam Application Entry link ಮೂಲಕ ತಮಗೆ ನೀಡಲಾದ User ID Password ಗಳನ್ನು ಬಳಸಿ <u>ಪರೀಕ್ಷಾ ನೋಂದಣಿಯನ್ನು ಕಡ್ಡಾಯವಾಗಿ Online ಮೂಲಕ ಮಾಡತಕ್ಕದ್ದು, ಪರೀಕ್ಷಾ ನೋಂದಣಿ ಮಾಡಿಸದ ವಿದ್ಯಾರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು.</u>

03/09/2020

ಕುಲಸಚಿವರು (ಪರೀಕ್ಷಾಂಗ)

ರಿಗೆ: **ನಿರ್ದೇಶಕರು,** ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ.

ಪ್ರತಿ:,

1. ಕುಲಸಚಿವರು/ಹಣಕಾಸು ಅಧಿಕಾರಿಯವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು
3. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೆಂಕನಿಡಿಯೂರು, ಉಡುಪಿ
4. ಪ್ರಾಂಶುಪಾಲರು, ಎಫ್.ಎಂ.ಕೆ.ಎಂ.ಸಿ. ಕಾಲೇಜು, ಮಡಿಕೇರಿ
5. The Principal Dr Dayananda Pai Sathish Pai Govt First Grade College Car street Mangalore -575001
6. The Principal Rosario College of Management Studies, Cathadral, Mangalore-1.
7. The Principal M.G.M. College, Udupi.
8. The Principal Milagres College, Kallianpur.

(2–8: ದೂರ ಶಿಕ್ಷಣದ ಅಧ್ಯಯನ /ಪರೀಕ್ಷಾ ಕೇಂದ್ರಗಳು)

9. The Principal Vivekananda College, Puttur
10. ವಿಶೇಷಾಧಿಕಾರಿ (ಪರೀಕ್ಷಾಂಗ)/ಸಹಾಯಕ ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ.
11. ಮಾನ್ಯ ಕುಲಪತಿಯವರ ಆಪ್ತ ಸಹಾಯಕರು, ಮಂಗಳೂರು ವಿಶ್ವವಿದ್ಯಾನಿಲಯ.
12. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮಂಗಳೂರು ವಲಯ.
13. ಅಧೀಕ್ಷಕರು ಎಸ್.1, ಎಸ್.2, ಎಸ್.3, ಎಸ್.4. ಎಸ್.5, ಎಸ್.6.
14. ಸಿಸ್ಟಂ ಅನಾಲಿಸ್ಟ್ ಆ್ಯಂಡ್ ಪ್ರೋಗ್ರಾಮರ್, ಕುಲಸಚಿವರು (ಪರೀಕ್ಷಾಂಗ)ರ ಕಛೇರಿ, ಮಂಗಳೂರು ವಿಶ್ವವಿದ್ಯಾನಿಲಯ.
15. ಆಪ್ತ ಸಹಾಯಕರು, ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
16. ಇ.9/ಇ.10/ಇ.11/ ಕಾರ್ಯನಿರ್ವಾಹಕರು.

Phone : 2287327 / 2287659 / 2284359 / 2287404 / 2287283 / 2287248
Fax : 0824 - 2287452 / 2287367 / 2287424
E-mail : controller@mangaloreuniversity.ac.in

# ಮಂಗಳೂರು ವಿಶ್ವವಿದ್ಯಾನಿಲಯ
# MANGALORE UNIVERSITY

(ACCREDITED BY NAAC WITH 'A' GRADE)

ಕುಲಸಚಿವರ ಕಛೇರಿ (ಪರೀಕ್ಷಾಂಗ)
ಮಂಗಳಗಂಗೋತ್ರಿ - ೫೭೪ ೧೯೯.
ಕರ್ನಾಟಕ ರಾಜ್ಯ, ಭಾರತ.

Office of the
Registrar(Evaluation)
Mangalagangothri - 574 199.
Karnataka State, India.

ಸಂಖ್ಯೆ: ಮಂವಿವಿ/ದೂ.ಶಿ.ಪ&ಸ್ನಾ/ಪರೀಕ್ಷಾ ತಯಾರಿ/2020–21/ಎಸ್1&ಎಸ್2 ದಿನಾಂಕ 18.08.2020

**"ಶೈಕ್ಷಣಿಕ ವರ್ಷ 2019–20ರ ದೂರಶಿಕ್ಷಣ ಕಾರ್ಯಕ್ರಮದ ಪರೀಕ್ಷೆಗಳ ಮಾರ್ಗಸೂಚಿಗಳು"**
**(ಸರಕಾರದ ಮಾರ್ಗಸೂಚಿ ಹಾಗೂ ಯುಜಿಸಿ ನಿಯಮಾನುಸಾರ ರಚಿಸಲಾಗಿದೆ.)**

ಶೈಕ್ಷಣಿಕ ವರ್ಷ 2019–20ರ ದೂರಶಿಕ್ಷಣ ಕಾರ್ಯಕ್ರಮದ ಪರೀಕ್ಷೆಗಳನ್ನು COVID-19 ರ ಹಿನ್ನೆಲೆಯಲ್ಲಿ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಎಲ್ಲಾ ಮಾರ್ಗಸೂಚಿ ಆದೇಶಗಳನ್ನು ಪಾಲಿಸಿಕೊಂಡು ನಡೆಸಲಾಗುವುದು.

**ಸರ್ಕಾರದ ನಿರ್ದೇಶನದಂತೆ ದೂರಶಿಕ್ಷಣ ಕಾರ್ಯಕ್ರಮದ ಪದವಿ ಮತ್ತು ಸ್ನಾತಕೋತ್ತರ ಪರೀಕ್ಷೆಗಳನ್ನು ದಿನಾಂಕ 15.10.2020ರಿಂದ ನಡೆಸಲಾಗುವುದು.**

**<u>ದೂರಶಿಕ್ಷಣ ಪದವಿ ಕಾರ್ಯಕ್ರಮಗಳ ಮಾರ್ಗಸೂಚಿಗಳು</u>**

I. **ಶೈಕ್ಷಣಿಕ ವರ್ಷ 2019–20ನೇ ಸಾಲಿನ ದೂರಶಿಕ್ಷಣ ಕಾರ್ಯಕ್ರಮದ ಪದವಿ ತರಗತಿಗಳ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಪದವಿ ಪೂರೈಸಿ ಅನುತ್ತೀರ್ಣರಾಗಿರುವ / ಹಿಂಬಾಕಿ ಇರುವ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ಈ ಕೆಳಗಿನ ವಿಧಾನದಂತೆ ನಡೆಸಲಾಗುವುದು.**

1. ಸದರಿ ನಿರ್ದೇಶನದಂತೆ ಪರೀಕ್ಷೆಗಳನ್ನು ಶೈಕ್ಷಣಿಕ ವರ್ಷ 2019–20ರಲ್ಲಿ ಪದವಿ ಕಾರ್ಯಕ್ರಮದ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಪದವಿ ಕಾರ್ಯಕ್ರಮವನ್ನು ಮುಗಿಸಿ ಅನುತ್ತೀರ್ಣರಾಗಿರುವ/ಹಿಂಬಾಕಿ ಇರುವ (ಪುನರಾವರ್ತಿತ) ವಿದ್ಯಾರ್ಥಿಗಳಿಗೆ ಮಾತ್ರ ನಡೆಸಲಾಗುವುದು.
2. ಪದವಿ ಕಾರ್ಯಕ್ರಮದ ಅಂತಿಮ ವರ್ಷದ ವಿದ್ಯಾರ್ಥಿಗಳು ಈ ವರ್ಷದ ಮತ್ತು ಹಿಂದಿನ ಎಲ್ಲಾ ವರ್ಷಗಳ ಹಿಂಬಾಕಿ ಕೋರ್ಸ್/ಪತ್ರಿಕೆಗಳಿಗೆ ಪುನರಾವರ್ತಿತ ವಿದ್ಯಾರ್ಥಿಗಳಾಗಿ ಪರೀಕ್ಷೆ ಬರೆಯಲು ಅವಕಾಶವಿದೆ. ಈಗಾಗಲೇ ಪದವಿ ಪೂರೈಸಿ ಹಿಂದಿನ ವರ್ಷಗಳ ಕೋರ್ಸ್/ಪತ್ರಿಕೆಗಳಲ್ಲಿ ಅನುತ್ತೀರ್ಣರಾಗಿದ್ದರೆ ಅಂತಹ ಹಿಂಬಾಕಿ ಕೋರ್ಸ್/ಪತ್ರಿಕೆಗಳ ಪರೀಕ್ಷೆಗಳಿಗೆ ಹಾಜರಾಗಲು ಅವಕಾಶವಿದೆ.

3. ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳು ತಾವು ಹಾಜರಾಗುತ್ತಿರುವ ಎಲ್ಲಾ ಕೋರ್ಸ್/ಪತ್ರಿಕೆಗಳಿಗೆ ದಿನಾಂಕ 11.09.2020ರೊಳಗೆ ಶುಲ್ಕ ಪಾವತಿಸಿ ಕಡ್ಡಾಯವಾಗಿ ಪರೀಕ್ಷಾ ನೋಂದಣಿಯನ್ನು ಮಾಡಬೇಕಾಗಿದೆ. **ಪರೀಕ್ಷಾ ನೋಂದಣಿಯನ್ನು ಮಾಡದ ಯಾವುದೇ ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ.**

II. ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವ ಸಂದರ್ಭದಲ್ಲಿ COVID-19 Positive/asymptomatic ಆಗಿದ್ದಲ್ಲಿ ಪರೀಕ್ಷೆ ಬರೆಯಲು ಆಯಾಯ ಪರೀಕ್ಷಾ ಕೇಂದ್ರಗಳಲ್ಲಿ ವಿಶೇಷ ಕೊಠಡಿ ವ್ಯವಸ್ಥೆ ಮಾಡಲು ಸೂಚಿಸಲಾಗಿದೆ.

III. **ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳ ಫಲಿತಾಂಶವನ್ನು ನೀಡುವ ವಿಧಾನ**

1. ಪ್ರಸಕ್ತ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಅವರು ಪಡೆದಿರುವ ಆಂತರಿಕ ಪರೀಕ್ಷಾ ಅಂಕಗಳನ್ನು ಕೋರ್ಸ್/ಪತ್ರಿಕೆಯ ಗರಿಷ್ಠ ಅಂಕಗಳಿಗೆ ಉನ್ನತೀಕರಿಸಿ ಫಲಿತಾಂಶ ನೀಡಲಾಗುವುದು.
2. ಪ್ರಸಕ್ತ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಅವರು ಪ್ರಥಮ ವರ್ಷದ ಪರೀಕ್ಷೆಗಳಲ್ಲಿ ಎಲ್ಲಾ ಕೋರ್ಸ್/ಪತ್ರಿಕೆಗಳಲ್ಲಿ **ಉತ್ತೀರ್ಣರಾಗಿದ್ದಲ್ಲಿ,** ಪ್ರಥಮ ವರ್ಷದಲ್ಲಿ ಪಡೆದಿರುವ ಶೇಕಡಾ 50 ಅಂಕಗಳು ಮತ್ತು ದ್ವಿತೀಯ ವರ್ಷದ ಆಂತರಿಕ ಪರೀಕ್ಷೆಗಳಲ್ಲಿ ಪಡೆದಿರುವ ಶೇಕಡಾ 50 ಅಂಕಗಳನ್ನು ಒಟ್ಟು ಸೇರಿಸಿ ದ್ವಿತೀಯ ವರ್ಷದ ಅಂಕಗಳನ್ನು ನೀಡಲಾಗುವುದು.
3. ಈ ಹಂತದಲ್ಲಿ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಯಾವುದೇ ಪರೀಕ್ಷೆಗಳನ್ನು ನಡೆಸಲಾಗುವುದಿಲ್ಲ.

IV. **ಮೇಲಿನ ಷರತ್ತುಗಳನ್ವಯ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳ ಫಲಿತಾಂಶವನ್ನು ಲೆಕ್ಕಾಚಾರ ಮಾಡುವ ವಿಧಾನ**

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| | | | | | | Current Semester IA Marks | | | |
| For First year students | | | | | | | | | |
| Model Courses | | | | | IA Marks Max | IA Obtained | IA upgraded Column (9 x 7 / 6) | Max marks | Current sem marks after Calculation Column (9 x 7 / 6) |
| ABC | | | | | 20 | 18 | Upgrade the IA marks to the max. marks for the Course/paper | 100 | 90 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| For Second year students | | | | | | | | | |
| Previous Year Marks | | | | | | Current Semester IA Marks | | | |
| Model Courses | Max marks | Marks Obtained | 50% of Column 2 | 50% of Column 3 | IA Marks Max | IA Obtained | IA upgraded Column (4 x 7 / 6) | Max marks | Current sem marks after Calculation Column (5 +8) |
| XYZ | 100 | 88 | 50 | 44 | 20 | 16 | 40 | 100 | 84 |

V. ಮೇಲಿನ ಲೆಕ್ಕಾಚಾರದ ಪ್ರಕಾರ ನೀಡಲಾಗುವ ಅಂಕಗಳನ್ನು ಶ್ರೇಣಿ(Class) ಅಥವಾ ಇನ್ನಾವುದೇ ಅರ್ಹತಾ ಮಾನದಂಡಗಳನ್ನು ನಿರ್ಧರಿಸಲು ಪರಿಗಣಿಸಲಾಗುವುದಿಲ್ಲ. **(One-time measure scheme)**

VI. ಮೇಲಿನ ಲೆಕ್ಕಾಚಾರದ ಪ್ರಕಾರ ನೀಡಲಾದ ಅಂಕಗಳಲ್ಲಿ/ಫಲಿತಾಂಶದಲ್ಲಿ ವಿದ್ಯಾರ್ಥಿಗೆ ಯಾವುದೇ ಅಸಮಾಧಾನವಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಸದರಿ ವರ್ಷದ ಎಲ್ಲಾ ಕೋರ್ಸ್/ಪತ್ರಿಕೆಯ ಪೂರ್ಣ ಫಲಿತಾಂಶವನ್ನು ತಿರಸ್ಕರಿಸಿ ಮುಂಬರುವ ಶೈಕ್ಷಣಿಕ ವರ್ಷಗಳಲ್ಲಿ ವಿಶ್ವವಿದ್ಯಾನಿಲಯದಿಂದ ನಡೆಸಲ್ಪಡುವ ಆಯಾ ಪರೀಕ್ಷೆಗಳಿಗೆ ಹಾಜರಾಗಲು ಅವಕಾಶವಿರುತ್ತದೆ.

**ದೂರಶಿಕ್ಷಣ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳ ಮಾರ್ಗಸೂಚಿಗಳು**

VII. **ಶೈಕ್ಷಣಿಕ ವರ್ಷ 2019–20ನೇ ಸಾಲಿನ ದೂರಶಿಕ್ಷಣ ಕಾರ್ಯಕ್ರಮದ ಸ್ನಾತಕೋತ್ತರ ಪದವಿ ತರಗತಿಗಳ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿ ಅನುತ್ತೀರ್ಣರಾಗಿರುವ / ಹಿಂಬಾಕಿ ಇರುವ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ಈ ಕೆಳಗಿನ ವಿಧಾನದಂತೆ ನಡೆಸಲಾಗುವುದು.**

1. ಸದರಿ ನಿರ್ದೇಶನದಂತೆ ಪರೀಕ್ಷೆಗಳನ್ನು ಶೈಕ್ಷಣಿಕ ವರ್ಷ 2019–20ರಲ್ಲಿ ಸ್ನಾತಕೋತ್ತರ ಪದವಿ ಕಾರ್ಯಕ್ರಮದ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಪದವಿ ಕಾರ್ಯಕ್ರಮವನ್ನು ಮುಗಿಸಿ ಅನುತ್ತೀರ್ಣರಾಗಿರುವ/ಹಿಂಬಾಕಿ ಇರುವ (ಪುನರಾವರ್ತಿತ) ವಿದ್ಯಾರ್ಥಿಗಳಿಗೆ ಮಾತ್ರ ನಡೆಸಲಾಗುವುದು.
2. ಸ್ನಾತಕೋತ್ತರ ಪದವಿ ಕಾರ್ಯಕ್ರಮದ ಅಂತಿಮ ವರ್ಷದ ವಿದ್ಯಾರ್ಥಿಗಳು ಈ ವರ್ಷದ ಮತ್ತು ಹಿಂದಿನ ವರ್ಷದ ಹಿಂಬಾಕಿ ಕೋರ್ಸು/ಪತ್ರಿಕೆಗಳಿಗೆ ಪುನರಾವರ್ತಿತ ವಿದ್ಯಾರ್ಥಿಗಳಾಗಿ ಪರೀಕ್ಷೆ ಬರೆಯಲು ಅವಕಾಶವಿದೆ. ಈಗಾಗಲೇ ಸ್ನಾತಕೋತ್ತರ ಪದವಿ ಪೂರೈಸಿ ಹಿಂದಿನ ವರ್ಷಗಳ ಕೋರ್ಸ್/ಪತ್ರಿಕೆಗಳಲ್ಲಿ ಅನುತ್ತೀರ್ಣರಾಗಿದ್ದರೆ ಅಂತಹ ಹಿಂಬಾಕಿ ಕೋರ್ಸು/ಪತ್ರಿಕೆಗಳ ಪರೀಕ್ಷೆಗಳಿಗೆ ಹಾಜರಾಗಲು ಅವಕಾಶವಿದೆ.
3. ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳು ತಾವು ಹಾಜರಾಗುತ್ತಿರುವ ಎಲ್ಲಾ ಕೋರ್ಸು/ಪತ್ರಿಕೆಗಳಿಗೆ ದಿನಾಂಕ 11.09.2020ರೊಳಗೆ ಶುಲ್ಕ ಪಾವತಿಸಿ ಕಡ್ಡಾಯವಾಗಿ ಪರೀಕ್ಷಾ ನೋಂದಣಿಯನ್ನು ಮಾಡಬೇಕಾಗಿದೆ. ಪರೀಕ್ಷಾ ನೋಂದಣಿಯನ್ನು ಮಾಡದ ಯಾವುದೇ ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ.

VIII. ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವ ಸಂದರ್ಭದಲ್ಲಿ COVID-19 Positive/asymptomatic ಆಗಿದ್ದಲ್ಲಿ ಪರೀಕ್ಷೆ ಬರೆಯಲು ಆಯಾಯ ಪರೀಕ್ಷಾ ಕೇಂದ್ರಗಳಲ್ಲಿ ವಿಶೇಷ ಕೊಠಡಿ ವ್ಯವಸ್ಥೆ ಮಾಡಲು ಸೂಚಿಸಲಾಗಿದೆ.

IX. **ಪ್ರಥಮ ವರ್ಷದ ವಿದ್ಯಾರ್ಥಿಗಳ ಫಲಿತಾಂಶವನ್ನು ನೀಡುವ ವಿಧಾನ**

1. ಪ್ರಸಕ್ತ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಅವರು ಪಡೆದಿರುವ ಆಂತರಿಕ ಪರೀಕ್ಷಾ ಅಂಕಗಳನ್ನು ಕೋರ್ಸ್/ಪತ್ರಿಕೆಯ ಗರಿಷ್ಠ ಅಂಕಗಳಿಗೆ ಉನ್ನತೀಕರಿಸಿ ಫಲಿತಾಂಶ ನೀಡಲಾಗುವುದು.
2. ಈ ಹಂತದಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಯಾವುದೇ ಪರೀಕ್ಷೆಗಳನ್ನು ನಡೆಸಲಾಗುವುದಿಲ್ಲ.

X. ಮೇಲಿನ ಷರತ್ತುಗಳನ್ವಯ ಪ್ರಥಮ ವರ್ಷದ ವಿದ್ಯಾರ್ಥಿಗಳ ಫಲಿತಾಂಶವನ್ನು ಲೆಕ್ಕಾಚಾರ ಮಾಡುವ ವಿಧಾನ

| 1 | 2 | 3 | 4 | 5 |
|---|---|---|---|---|
| Model Courses/ Subjects | Max Marks | IA Marks Maximum | IA Marks Obtained | IA upgraded to the maximum marks Column (2x4/3) |
| First Year Marks | | | | |
| ABC | 100 | 20 | 15 | 75 |

XI. ಮೇಲಿನ ಲೆಕ್ಕಾಚಾರದ ಪ್ರಕಾರ ನೀಡಲಾಗುವ ಅಂಕಗಳನ್ನು ಶ್ರೇಣಿ(Class) ಅಥವಾ ಇನ್ನಾವುದೇ ಅರ್ಹತಾ ಮಾನದಂಡಗಳನ್ನು ನಿರ್ಧರಿಸಲು ಪರಿಗಣಿಸಲಾಗುವುದಿಲ್ಲ. **(One-time measure scheme)**

XII. ಮೇಲಿನ ಲೆಕ್ಕಾಚಾರದ ಪ್ರಕಾರ ನೀಡಲಾದ ಅಂಕಗಳಲ್ಲಿ/ಫಲಿತಾಂಶದಲ್ಲಿ ವಿದ್ಯಾರ್ಥಿಗೆ ಯಾವುದೇ ಅಸಮಾಧಾನವಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಸದರಿ ವರ್ಷದ ಎಲ್ಲಾ ಕೋರ್ಸ್/ಪತ್ರಿಕೆಯ ಪೂರ್ಣ ಫಲಿತಾಂಶವನ್ನು ತಿರಸ್ಕರಿಸಿ ಮುಂಬರುವ ಶೈಕ್ಷಣಿಕ ವರ್ಷಗಳಲ್ಲಿ ವಿಶ್ವವಿದ್ಯಾನಿಲಯದಿಂದ ನಡೆಸಲ್ಪಡುವ ಆಯಾ ಪರೀಕ್ಷೆಗಳಿಗೆ ಹಾಜರಾಗಲು ಅವಕಾಶವಿರುತ್ತದೆ.

XIII. ಯಾವುದೇ ವಿದ್ಯಾರ್ಥಿಗೆ COVID-19 ರ ಹಿನ್ನೆಲೆಯಲ್ಲಿ ಶೈಕ್ಷಣಿಕ ತೊಂದರೆಗಳು/ಅಡೆತಡೆಗಳು ಉಂಟಾಗದಂತೆ ನೋಡಿಕೊಳ್ಳಲು ಮತ್ತು ಈ ಶೈಕ್ಷಣಿಕ ವರ್ಷದ ಎಲ್ಲಾ ಚಟುವಟಿಕೆಗಳನ್ನು ಪೂರ್ಣಗೊಳಿಸಲು ಪೂರಕ ಸಹಕಾರಗಳನ್ನು ನೀಡಲು ಗೌರವಾನ್ವಿತ ಕುಲಪತಿಗಳು ನಿರ್ದೇಶಿಸಿರುತ್ತಾರೆ. ಆದುದರಿಂದ ಎಲ್ಲಾ ವಿದ್ಯಾರ್ಥಿಗಳ, ಪ್ರಾಂಶುಪಾಲರ, ಶಿಕ್ಷಕರ, ಪೋಷಕರ, ಸಮಾಜದ ಮತ್ತು ದೇಶದ ಹಿತರಕ್ಷಣೆಗೆ ತಮ್ಮೆಲ್ಲರ ಸಹಾಯ ಮತ್ತು ಸಹಕಾರಗಳನ್ನು ಕೋರಲಾಗಿದೆ.

**ಸೂಚನೆ: ಮೇಲಿನ ಮಾರ್ಗಸೂಚಿಗಳಲ್ಲಿ ತಿಳಿಸಲಾದ ವಿಷಯಗಳು, ವಿವರಗಳು, ಇತ್ಯಾದಿ COVID-19 ರ ಹಿನ್ನೆಲೆಯಲ್ಲಿ 2019–20ರ ಶೈಕ್ಷಣಿಕ ವರ್ಷಕ್ಕೆ ಮಾತ್ರ ಅನ್ವಯಿಸುತ್ತವೆ.**

21/8/2020

**ಕುಲಸಚಿವರು (ಪರೀಕ್ಷಾಂಗ).**

E:\E2\MISC\Guidelines for the UG & PG Distance.docx